# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತ ಗಂಗೋತ್ರಿ, ಮೈಸೂರು - 570 006.

**ಆಡಳಿತ ವಿಭಾಗ**

ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/195/2026-27 ದಿನಾಂಕ:16.07.2026

## ಸುತ್ತೋಲೆ

**ವಿಷಯ:** ವಿಶ್ವವಿದ್ಯಾನಿಲಯದ ಬೋಧಕ/ಬೋಧಕೇತರ ಸಿಬ್ಬಂದಿವರ್ಗದವರು ಸಮುಚಿತ ಮಾರ್ಗದಲ್ಲಿ ಮನವಿಗಳನ್ನು ಸಲ್ಲಿಸುವ ಕುರಿತು.

**ಉಲ್ಲೇಖ:** 1.ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/195/2021-22,ದಿ:05.10.2021.

2.ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/195/2021-22,ದಿ:19.01.2022.

3.ರಾಜ್ಯಪಾಲರ ಅಧೀನ ಕಾರ್ಯದರ್ಶಿ, ಘನತೆವೆತ್ತ ರಾಜ್ಯಪಾಲರ ಕಾರ್ಯಾಲಯ, ಇವರ ಆದೇಶ ಸಂಖ್ಯೆ:ಜಿಎಸ್ 04 ಕೆಒಎಂ 2026, ದಿನಾಂಕ:13.03.2026.

4.ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:14.07.2026.

******

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದ ಎಲ್ಲಾ ಬೋಧಕ/ಬೋಧಕೇತರ ಸಿಬ್ಬಂದಿವರ್ಗದವರು ತಮ್ಮ ಮನವಿ ಪತ್ರಗಳನ್ನು ಸಮುಚಿತ ಮಾರ್ಗದಲ್ಲಿ ಸಲ್ಲಿಸುವಂತೆ, ಉಲ್ಲೇಖ-1&2ರ ಸುತ್ತೋಲೆಗಳಲ್ಲಿ ತಿಳಿಸಲಾಗಿತ್ತು. ಆದರೆ ವಿಶ್ವವಿದ್ಯಾನಿಲಯದ ಕೆಲವು ಸಿಬ್ಬಂದಿವರ್ಗದವರು ಸದರಿ ಕ್ರಮವನ್ನು ಅನುಸರಿಸದೇ ನೇರವಾಗಿ ಘನತೆವೆತ್ತ ರಾಜ್ಯಪಾಲರ ಕಾರ್ಯಾಲಯಕ್ಕೆ ಹಾಗೂ ವಿವಿಧ ಇಲಾಖೆಗಳಿಗೆ/ಅಧಿಕಾರಿಗಳಿಗೆ ಮನವಿಯನ್ನು ಸಲ್ಲಿಸುತ್ತಿರುವುದನ್ನು ರಾಜ್ಯಪಾಲರ ಕಾರ್ಯಾಲಯ, ಇವರು ಗಂಭೀರವಾಗಿ ಪರಿಗಣಿಸಿದ್ದು, ಘನತೆವೆತ್ತ ರಾಜ್ಯಪಾಲರಿಗೆ ಹಾಗೂ ವಿವಿಧ ಇಲಾಖೆಗಳಿಗೆ/ಅಧಿಕಾರಿಗಳಿಗೆ ಮನವಿಯನ್ನು ಸಲ್ಲಿಸುವಾಗ ಶಿಷ್ಟಾಚಾರ ಮತ್ತು ಕಛೇರಿ ಕಾರ್ಯವಿಧಾನಗಳನ್ನು ಅನುಸರಿಸುವಂತೆ ಎಚ್ಚರಿಕೆ ನೀಡಲು ಆದೇಶಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ವಿಶ್ವವಿದ್ಯಾನಿಲಯದ ಬೋಧಕ/ಬೋಧಕೇತರ ಸಿಬ್ಬಂದಿವರ್ಗದವರು ಸಮುಚಿತ ಮಾರ್ಗದಲ್ಲಿ ಮನವಿಗಳನ್ನು ಸಲ್ಲಿಸುವ ಕುರಿತು ವಿಶ್ವವಿದ್ಯಾನಿಲಯವು ಈಗಾಗಲೇ ಉಲ್ಲೇಖ-1&2ರಂತೆ ಸುತ್ತೋಲೆ ಹೊರಡಿಸಿದ್ದರೂ ಸಹ ವಿಶ್ವವಿದ್ಯಾನಿಲಯದ ಕೆಲವು ಸಿಬ್ಬಂದಿವರ್ಗದವರು ಸದರಿ ಸುತ್ತೋಲೆಯ ಅಂಶಗಳನ್ನು ಪಾಲನೆ ಮಾಡದೇ ವಿಶ್ವವಿದ್ಯಾನಿಲಯದ ಘನತೆಗೆ ಧಕ್ಕೆ ತರುವಂತೆ ನಡೆದುಕೊಳ್ಳುತ್ತಿರುವುದು ಕಂಡುಬರುತ್ತಿದ್ದು, ವಿಶ್ವವಿದ್ಯಾನಿಲಯದ ನಿಯಮ ಶಿಷ್ಟಾಚಾರಗಳಿಗೆ ವಿರುದ್ಧವಾಗಿರುತ್ತದೆ. ಈ ನಡವಳಿಕೆಯನ್ನು ವಿಶ್ವವಿದ್ಯಾನಿಲಯವು ಗಂಭೀರವಾಗಿ ಪರಿಗಣಿಸಿದ್ದು, ವಿಶ್ವವಿದ್ಯಾನಿಲಯದ ನೌಕರರು ಈ ರೀತಿಯ ನಡವಳಿಕೆಯನ್ನು ಬದಲಾಯಿಸಿಕೊಂಡು, ಘನತೆವೆತ್ತ ರಾಜ್ಯಪಾಲರಿಗೆ, ಸರ್ಕಾರದ ವಿವಿಧ ಇಲಾಖೆಗಳಿಗೆ ಹಾಗೂ ವಿಶ್ವವಿದ್ಯಾನಿಲಯಕ್ಕೆ ಮನವಿಯನ್ನು ಸಲ್ಲಿಸುವಾಗ ಸಮುಚಿತ ಮಾರ್ಗದಲ್ಲಿ ಶಿಷ್ಟಚಾರ ಮತ್ತು ಕಛೇರಿ ಕಾರ್ಯವಿಧಾನಗಳನ್ನು ಅನುಸರಿಸಲು ತಿಳಿಸುತ್ತಾ, ತಪ್ಪಿದಲ್ಲಿ ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ಸಿಸಿಎ) ಪರಿನಿಯಮಗಳಡಿಯಲ್ಲಿ ಯಾವುದೇ ಮುನ್ಸೂಚನೆ ನೀಡದೆ ಶಿಸ್ತುಕ್ರಮ ಜರುಗಿಸಲಾಗುವುದೆಂದು ಈ ಮೂಲಕ ಎಚ್ಚರಿಕೆ ನೀಡಿದೆ.

**ಕುಲಸಚಿವ**

**ಗೆ,**

**ವಿ.ವಿ.ನಿಲಯದ ಎಲ್ಲಾ ಬೋಧಕ/ಬೋಧಕೇತರ ಸಿಬ್ಬಂದಿವರ್ಗದವರು, ಕರಾಮುವಿ.**

**ಪ್ರತಿ:**

1. ಡೀನ್ (ಶೈಕ್ಷಣಿಕ), ಕರಾಮುವಿ.
2. ಹಣಕಾಸು ಅಧಿಕಾರಿಗಳು,ಕರಾಮುವಿ.
3. ಕುಲಸಚಿವ (ಪರೀಕ್ಷಾಂಗ), ಕರಾಮುವಿ.
4. ಡೀನ್ (ಅಧ್ಯಯನ ಕೇಂದ್ರಗಳು), ಕರಾಮುವಿ.
5. ಎಲ್ಲಾ ಅಧ್ಯಯನ ವಿಭಾಗಗಳ ಮುಖ್ಯಸ್ಥರು, ಕರಾಮುವಿ.
6. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು, ಕರಾಮುವಿ.
7. ಕಾರ್ಯಪಾಲಕ ಅಭಿಯಂತರ, ಇಂಜಿನಿಯರಿಂಗ್ ವಿಭಾಗ, ಕರಾಮುವಿ.
8. ಗ್ರಂಥಪಾಲಕರು, ಗ್ರಂಥಾಲಯ ವಿಭಾಗ, ಕರಾಮುವಿ.
9. ಎಲ್ಲಾ ವಿಭಾಗ/ಪೀಠ/ಘಟಕಗಳ ಸಂಯೋಜನಾಧಿಕಾರಿಗಳು/ನಿರ್ದೇಶಕರು, ಕರಾಮುವಿ.
10. ಎಲ್ಲಾ ಪ್ರಾದೇಶಿಕ ನಿರ್ದೇಶಕರು, ಕರಾಮುವಿ ಪ್ರಾದೇಶಿಕ ಕೇಂದ್ರಗಳು.
11. ಡಾ. ನವೀನ್ ಕುಮಾರ್ ಸಿ.ಜಿ., ನೋಡಲ್ ಆಫೀಸರ್, ವೆಬ್‌ಸೈಟ್, ಕರಾಮುವಿ - ವಿ.ವಿ ನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಿದೆ.
12. ವಿಶೇಷ ಕರ್ತವ್ಯಾಧಿಕಾರಿಗಳು, ಮಾನ್ಯ ಕುಲಪತಿಗಳ ಕಾರ್ಯಾಲಯ, ಕರಾಮುವಿ.
13. ಮಾನ್ಯ ಕುಲಪತಿಗಳ ಆಪ್ತ ಸಹಾಯಕರು, ಕರಾಮುವಿ.
14. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ.
15. ಕಛೇರಿ ಪ್ರತಿ/ ಸಂಬಂಧಿಸಿದ ಕಡತಕ್ಕೆ.